# ಕ್ರಿಕೆಟ್‌ನ ನೈಜ ಹೀರೊಗಳು

■ ಪ್ರವೀಣ ಕುಲಕರ್ಣಿ



ವಿಶ್ವಕಪ್ ಕ್ರಿಕೆಟ್ ಟ್ರೋಫಿಯನ್ನು ಯಾರೇ ಎತ್ತಿ ಹಿಡಿಯಲಿ, ನಿಜವಾಗಿಯೂ ಈ ಟೂರ್ನಿಯಲ್ಲಿ ಗೆದ್ದವರೆಂದರೆ ಅದು ಅಫ್ಘಾನಿಸ್ತಾನ ತಂಡದವರು. ಹಾಗೇ ನೋಡಿದರೆ ಆ ತಂಡದ ರಾಷ್ಟ್ರಧ್ವಜಕ್ಕೆ ಜಗತ್ತಿನ ಬಹುತೇಕ ಕಡೆ ಈಗ ಮಾನ್ಯತೆಯೇ ಇಲ್ಲ. ಅವರು ಹಾಡುವ ರಾಷ್ಟ್ರಗೀತೆ ಸಹ ಎರಡು ವರ್ಷಗಳ ಹಿಂದೆಯೇ ಮೂಲೆಗುಂಪಾದ ಅಲ್ಲಿನ ಆಡಳಿತ ವ್ಯವಸ್ಥೆ ಅಳವಡಿಸಿಕೊಂಡಿದ್ದು. ಹೀಗಿದ್ದೂ ಅಫ್ಘಾನಿಸ್ತಾನದ ಕ್ರಿಕೆಟ್‌ಪಟುಗಳು ಪ್ರಸಕ್ತ ವಿಶ್ವಕಪ್ ಟೂರ್ನಿಯ ನೈಜ ಹೀರೊಗಳಾಗಿ ಹೊರಹೊಮ್ಮಿದ್ದಾರೆ. ಚಾಂಪಿಯನ್ ಪಟ್ಟ ಏರಿದ್ದ ಇಂಗ್ಲೆಂಡ್, ಶ್ರೀಲಂಕಾ, ಪಾಕಿಸ್ತಾನ ತಂಡಗಳಿಗೇ ಸೋಲುಣಿಸಿದ ಆಟಗಾರರು ಅವರು. ಈ ತಂಡದ ಕೆಲವು ಆಟಗಾರರು ಎಂತಹ ತಾರೆಗಳಾಗಿ ಕಂಗೊಳಿಸುತ್ತಿದ್ದಾರೆ ಎಂದರೆ, ಇಡೀ ಕ್ರೀಡಾಂಗಣದಲ್ಲಿ ಅವರ ಹೆಸರು ಮತ್ತೆ ಮತ್ತೆ ಪ್ರತಿಧ್ವನಿಸುತ್ತಿರುತ್ತದೆ.

ಕ್ರಿಕೆಟ್‌ನ ಇತಿಹಾಸದಲ್ಲೇ ಇಷ್ಟೊಂದು ಕ್ಷಿಪ್ರವಾಗಿ ಬೆಳೆದ ಬೇರೊಂದು ತಂಡ ಇಲ್ಲ. ದೇಶದಲ್ಲಿ ಅಷ್ಟೆಲ್ಲ ದಂಗೆ, ಅವಾಂತರ, ರೂಪಾಂತರಗಳು ನಡೆದರೂ ನಿರಂತರತೆಯನ್ನು ಕಾಯ್ದುಕೊಳ್ಳುವಲ್ಲಿ ಆ ತಂಡ ಹಿಂದೆ ಬಿದ್ದಿಲ್ಲ. ಅಫ್ಘಾನಿಸ್ತಾನದ ಸೂಕ್ಷ್ಮ ಪರಿಸ್ಥಿತಿ, ಧರ್ಮಾಂಧತೆ, ಅರಾಜಕತೆಯಂತಹ ಕೊಳೆಯೆಲ್ಲ ತಂಡದ ಯಶಸ್ಸಿನ ಹೊಳೆಯಲ್ಲಿ ಕೊಚ್ಚಿಹೋಗಿದೆ. ‘ದೇಶದ ಜನ ನಮಗಾಗಿ ಪ್ರಾರ್ಥಿಸುತ್ತಿದ್ದಾರೆ. ಮನೆಯಲ್ಲಿ ಕುಳಿತು ನಮ್ಮ ಪಂದ್ಯಗಳನ್ನು ಪ್ರೀತಿಯಿಂದ ನೋಡುತ್ತಿದ್ದಾರೆ ಮತ್ತು ಗೆಲುವಿಗಾಗಿ ಹಂಬಲಿಸುತ್ತಿದ್ದಾರೆ. ಹೌದು, ಅಫ್ಘಾನಿಸ್ತಾನದಲ್ಲಿ ಸದ್ಯ ಸಂತಸವನ್ನು ತರುತ್ತಿರುವುದು ಕ್ರಿಕೆಟ್ ಮಾತ್ರ’ ಎಂದು ಹೇಳುತ್ತಾರೆ, ಆ ತಂಡದ ತಾರಾ ಆಟಗಾರರಲ್ಲಿ ಒಬ್ಬರಾಗಿರುವ ರಷೀದ್ ಖಾನ್.

ಕತ್ತಲೆಯ ಸುರಂಗದಲ್ಲಿ ಸಿಲುಕಿಕೊಂಡಿರುವ ಆ ದೇಶದ ಪಾಲಿಗೆ ಸಣ್ಣ ಗೆಲುವೂ ಬೆಳಕಿನ ಕಿರಣಗಳನ್ನು ಹೊಮ್ಮಿಸಬಲ್ಲದು. ಅಫ್ಘಾನಿಸ್ತಾನದಲ್ಲಿ ತಾಲಿಬಾನ್ ರಾಜ್ಯಭಾರ ಶುರುವಾದ ಮೇಲೆ ಆ ದೇಶಕ್ಕೆ ವಿದೇಶಿ ನೆರವು ಸಂಪೂರ್ಣ ನಿಂತಿದೆ. ಅಲ್ಲಿನ ಪ್ರತಿ ಹತ್ತು ಜನರಲ್ಲಿ ಒಂಬತ್ತು ಮಂದಿ ಬಡತನದ ರೇಖೆಗಿಂತ ಕೆಳಗಿದ್ದು, ಅವರ ದೈನಂದಿನ ಜೀವನ ನಿರ್ವಹಣೆ ಕಡುಕಷ್ಟವಾಗಿ ಪರಿಣಮಿಸಿದೆ. ಇದರ ಜೊತೆಗೆ ಪ್ರಕೃತಿಯ ಮುನಿಸೂ ಸೇರಿಕೊಂಡು ಭೂಕಂಪ ಸಂಭವಿಸಿದ್ದರಿಂದ ಹಲವು ಹಳ್ಳಿಗಳು ನಾಮಾವಶೇಷ ಆಗಿವೆ. ಸಾವಿರ ಸಂಖ್ಯೆಯಲ್ಲಿ ಜನ ಸಾವನ್ನಪ್ಪಿದ್ದಾರೆ.

ಮಹಿಳೆಯರು ಮನೆಯೊಳಗೇ ಇರಬೇಕೆನ್ನುವ, ಅವರ ಕೆಲಸಮಾಡುವ ಹಕ್ಕನ್ನು ನಿರಾಕರಿಸುವ, ಹೆಣ್ಣುಮಕ್ಕಳು ಆರನೇ ತರಗತಿ ಬಳಿಕ ಓದಲು ಅವಕಾಶ ಇಲ್ಲವೆನ್ನುವ ತಾಲಿಬಾನ್ ಆಡಳಿತಕ್ಕೆ ಮನ್ನಣೆ ನೀಡಲು ಬಹುತೇಕ ರಾಷ್ಟ್ರಗಳು ನಿರಾಕರಿಸಿವೆ. ಅದರ ಬಿಳಿಧ್ವಜಕ್ಕೂ ಅಂತರರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಮನ್ನಣೆ ಇಲ್ಲ. 2021ರಲ್ಲಿ ನೆಲಕಚ್ಚಿದ ಆಡಳಿತ ವ್ಯವಸ್ಥೆಯ ಧ್ವಜ ಹಿಡಿದುಕೊಂಡೇ ಇಲ್ಲಿನ ಆಟಗಾರರು ಕ್ರೀಡಾಕೂಟದಲ್ಲಿ ಭಾಗವಹಿಸುತ್ತಿದ್ದಾರೆ. ರಾಷ್ಟ್ರಗೀತೆ ಕೂಡ ಹಳೆಯದೇ ಆಗಿದೆ. ಸದ್ಯದ ತಾಲಿಬಾನ್ ಆಡಳಿತವು ಅಧಿಕೃತವಾಗಿ ಯಾವುದೇ ರಾಷ್ಟ್ರಗೀತೆಯನ್ನು ಹೊಂದಿಲ್ಲ. ಸಾರ್ವಜನಿಕವಾಗಿ ಸಂಗೀತಗೋಷ್ಠಿ ನಡೆಸುವುದು ಇಸ್ಲಾಂ ಧರ್ಮಕ್ಕೆ ವಿರುದ್ಧವಾದುದು ಎಂದು ಅಲ್ಲಿನ ಆಡಳಿತ ನಂಬಿದೆ.

ಅಫ್ಘನ್ ತಂಡದ ಯಶಸ್ಸನ್ನು ತಾಲಿಬಾನ್ ಆಸ್ವಾದಿಸತೊಡಗಿದೆ. ತಂಡ ಗೆದ್ದಾಗಲೆಲ್ಲ ಅಲ್ಲಿನ ಬೀದಿಗಳಲ್ಲಿ ವಿಜಯೋತ್ಸವ ಆಚರಿಸಲಾಗುತ್ತಿದೆ. ಅಫ್ಘನ್‌ನ ಕ್ರಿಕೆಟ್‌ಪಟುಗಳು ಎಂತಹ ಸಹೃದಯಿಗಳೆಂದರೆ, ಭೂಕಂಪ ಸಂತ್ರಸ್ತರ ನೆರವಿಗಾಗಿ ರಷೀದ್ ಖಾನ್ ಅವರಲ್ಲದೆ ಮೊಹಮ್ಮದ್ ನಬಿ ಕೂಡ ಪ್ರತಿಷ್ಠಾನ ಸ್ಥಾಪಿಸಿದ್ದಾರೆ. ಸಾಧ್ಯವಿರುವ ಎಲ್ಲ ಮೂಲಗಳಿಂದ ನಿಧಿ ಸಂಗ್ರಹಿಸಿ, ಸಂತ್ರಸ್ತರ ಕಣ್ಣೀರು ಒರೆಸುವ ಕೆಲಸವನ್ನೂ ಮಾಡುತ್ತಿದ್ದಾರೆ. ಬಾಲಕಿಯರ ಶಿಕ್ಷಣದ ಪುನರಾರಂಭಕ್ಕಾಗಿ ನಡೆದಿರುವ ಆಂದೋಲನಕ್ಕೂ ಈ ಇಬ್ಬರೂ ಆಟಗಾರರು ಧ್ವನಿಯಾಗಿದ್ದಾರೆ.

‘ಅಫ್ಘನ್‌ನ ಹೆಣ್ಣುಮಕ್ಕಳು ಮತ್ತು ಸಹೋದರಿಯರ ಜೊತೆ ನಾವು ನಿಲ್ಲುತ್ತೇವೆ. ಅವರಿಗೆ ಪ್ರೌಢಶಿಕ್ಷಣ ಸಿಗಬೇಕೆನ್ನುವುದು ನಮ್ಮ ಹಂಬಲ. ಬಾಲಕಿಯರ ಶಿಕ್ಷಣದ ವಿಷಯದಲ್ಲಿ ಒಂದೊಂದು ದಿನ ವ್ಯರ್ಥವಾದಷ್ಟೂ ನಮ್ಮ ದೇಶದ ಭವಿಷ್ಯದ ಮೇಲೆ ಕರಿನೆರಳು ಹೆಚ್ಚು ಹೆಚ್ಚು ಚಾಚುತ್ತಾ ಹೋಗುತ್ತದೆ ಎಂಬುದನ್ನು ಮರೆಯುವಂತಿಲ್ಲ’ ಎಂದು ದಿಟ್ಟವಾಗಿ ಹೇಳುವ ಛಾತಿಯನ್ನು ರಷೀದ್ ಪ್ರದರ್ಶಿಸಿದ್ದಾರೆ.

ಅಫ್ಘಾನಿಸ್ತಾನದಲ್ಲಿ ಕ್ರಿಕೆಟ್ ಇತ್ತೀಚಿನ ದಶಕಗಳಲ್ಲಿ ವೇಗವಾಗಿ ಬೆಳೆದಿದೆ. ಮೊದಲ ತಲೆಮಾರಿನ ಆಟಗಾರರು ಕ್ರಿಕೆಟ್ ಕಲಿತಿದ್ದು ಪಾಕಿಸ್ತಾನದ ನಿರಾಶ್ರಿತರ ಶಿಬಿರಗಳಲ್ಲಿ. ಇಲ್ಲಿ ರಾಷ್ಟ್ರೀಯ ತಂಡವೊಂದು ರೂಪುಗೊಂಡಿದ್ದೇ 2000ರ ದಶಕದಲ್ಲಿ. ಅಲ್ಲಿಂದ ಮುಂದೆ ಈ ತಂಡ ಬೆಳೆದದ್ದು ಒಂದು ರಮ್ಯವಾದ ಕಥೆ. ಒಂದೇ ದಶಕದ ಅವಧಿಯಲ್ಲಿ ಆ ತಂಡ ಎಂತಹ ಪ್ರಗತಿ ಸಾಧಿಸಿದೆ ಎಂದರೆ ಮೂರು ವಿಶ್ವಕಪ್ ಟೂರ್ನಿಗಳಲ್ಲಿ ಆಡುವ ಅರ್ಹತೆಯನ್ನು ಗಿಟ್ಟಿಸಿದೆ.

ಪ್ರಸಕ್ತ ವಿಶ್ವಕಪ್ ಟೂರ್ನಿಯಲ್ಲಿ ಬೆರಳೆಣಿಕೆಯಷ್ಟು ತವರಿನ ಅಭಿಮಾನಿಗಳ ಜತೆಗೆ ಸಾವಿರ ಸಾವಿರ ಸಂಖ್ಯೆಯ ಭಾರತೀಯ ಕ್ರಿಕೆಟ್ ಪ್ರಿಯರಿಂದಲೂ ತಂಡ ಬೆಂಬಲ ಗಿಟ್ಟಿಸಿದೆ. ಪಾಕಿಸ್ತಾನದ ವಿರುದ್ಧ ಅಫ್ಘನ್ ತಂಡ ಜಯಿಸಿದಾಗ ನಡೆದ ವಿಜಯೋತ್ಸವವಂತೂ ಆ ತಂಡದ ಆಟಗಾರರು ಸದಾಕಾಲ ಸ್ಮರಣೆಯಲ್ಲಿ ಇಡುವಂಥದ್ದು. ಪಾಕಿಸ್ತಾನದ ನಿರಾಶ್ರಿತರ ಶಿಬಿರಗಳಿಂದ ಹತ್ತಾರು ಸಾವಿರ ಜನ ಅಫ್ಘನ್ನರನ್ನು ಸದ್ಯ ಒಕ್ಕಲೆಬ್ಬಿಸಲಾಗುತ್ತಿದೆ. ಅಲ್ಲದೆ, ಅಫ್ಘಾನಿಸ್ತಾನದ ಅಸ್ಥಿರತೆಯಲ್ಲಿ ಪಾಕಿಸ್ತಾನದ ಪಾತ್ರವೂ ಅಧಿಕವಾಗಿದೆ. ಹೀಗಾಗಿ ಪಾಕ್ ವಿರುದ್ಧದ ಗೆಲುವು ಅವರಲ್ಲಿ ಆ ಪರಿ ಸಂಭ್ರಮ ತಂದಿದೆ. ತಂಡ ಏರಬಹುದಾದ ಎತ್ತರದ ಕುರಿತು ಜಗತ್ತಿನ ಮೂಲೆ–ಮೂಲೆಯಿಂದಲೂ ಒಳ್ಳೆಯ ಮಾತುಗಳು ಕೇಳಿಬರುತ್ತಿವೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65